# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು</u>

## ಸಿ ಸಿ ನಂಃ291/2018

## ಚಾಸಾ-4/ಪ್ರಾಸಾ-2

**ಪ್ರಮಾಣ ವಚನ ಭೋಧಿಸಲಾಯಿತು.** **<u>ದಿನಾಂಕಃ26.11.2024.</u>**

ಹೆಸರು : ಚಂದ್ರಮ್ಮ ಕೋಂ ಭರಲಿಂಗಪ್ಪ
ವಯಸ್ಸು : **60** ವರ್ಷ
ಉದ್ಯೋಗ : ಮನೆಗೆಲಸ
ವಿಳಾಸ : ನಾಗರಕೊಂಡ ಗ್ರಾಮ, ಹರಪನಹಳ್ಳಿ ತಾಲೂಕು

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ</u>**

ಆರೋಪಿ ನಂಃ1 ರಿಂದ 7 ನನಗೆ ಗೊತ್ತು ಅವರು ಮಾಗಡಿ ಗ್ರಾಮದವರು. ಚಾಸಾ1 ರಿಂದ 3 ಮತ್ತು 5 ನಮ್ಮ ಸಂಬಂದಿಕರು. ಈಗೆ 4-5 ವರ್ಷಗಳ ಹಿಂದೆ ಆರೋಪಿಗಳು ನಾವು ಉಳುಮೆ ಮಾಡುತ್ತಿದ್ದ ಸರ್ವೆ ನಂಃ28 ಹೊಲವನ್ನು ಕಸಿದುಕೊಂಡಿರುತ್ತಾರೆ ಅದನ್ನು ಬಿಡಿಸಲು ನಾವು ಹೋಗಿರುತ್ತೇವೆ. ನಾನು ಮತ್ತು ಚಾಸಾ1 ರಿಂದ 3 ಮತ್ತು 5 ಹೋಗಿರುತ್ತೇವೆ. ಆಗ ಸಮಯ ಬೆಳಿಗ್ಗೆ 08.30 ಆಗಿತ್ತು. ಆರೋಪಿಗಳು ಟ್ರ್ಯಾಕ್ಟರ್ ನಲ್ಲಿ ಬಂದು ಹೊಲ ಉಳುಮೆ ಮಾಡಲು ಬಂದಿದ್ದರು. ನಾವು ಅವರನ್ನು ನಮ್ಮ ಹೊಲ ಬಿಟ್ಟು ಕೊಡಲು ಕೇಳಿರುತ್ತೇವೆ. ನಾವು ಬಿಟ್ಟು ಕೊಡುವುದಿಲ್ಲ ಎಂದು ಹೇಳಿ ನಮ್ಮ ಮೇಲೆ ಗಲಾಟೆ ಮಾಡಿರುತ್ತಾರೆ. ನನಗೆ ಕೈಗೆ ಪೆಟ್ಟು ಬಿದ್ದಿರುತ್ತದೆ. ನಾವು ಹೊಲ ಬಿಟ್ಟು ಬಂದಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ</u> ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನಾವು ಹೊಲದಲ್ಲಿ ದಿಃ20.06.2017 ರಂದು ಬೆಳಿಗ್ಗೆ 11.00 ಸಮಯಕ್ಕೆ ಉಳುಮೆ ಮಾಡುತ್ತಿದ್ದಾಗ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಆರೋಪಿಗಳು

ನನ್ನನ್ನು ಉದ್ದೇಶಿಸಿ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ಆರೋಪಿತರು ಜೀವ ಬೆದರಿಕೆಯಾಕಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ, ಚಾಸಾ1 ರಿಂದ 3 ಮತ್ತು 5 ರವರಿಗೆ ಕೈ ಕಾಲುಗಳಿಂದಹೊಡೆದುಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. 1ನೇ ಆರೋಪಿಯು ಚಾಸಾ1 ರವರಿಗೆ ಕಲ್ಲಿನಿಂದ ಹೊಡೆದಿರುತ್ತಾರೆ ಎಂದರೆ ಸರಿ. ಅದೇ ಕಲ್ಲಿನಿಂದ ಚಾಸಾ2 ರವರ ಬಾಯಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಅದೇ ರೀತಿ ಚಾಸಾ3 ರವರ ಬಲಗೈಗೆ 2ನೇ ಆರೋಪಿಯೂ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಅದೇ ಕಲ್ಲನ್ನು ತೆಗೆದುಕೊಂಡು 2ನೇ ಆರೋಪಿಯೂ ಕಲ್ಲನ್ನು ತೆಗೆದುಕೊಂಡು ನನಗೆ ಎಡಮುಂಗೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಜಗಳ ಬಿಡಿಸಲು ಬಂದ ಚಾಸಾ6 ರಿಂದ 11 ರವರಿಗೆ ಆರೋಪಿ ನಂ:3 ರಿಂದ 5 ರವರು ಕಲ್ಲನ್ನು ತೂರಿರುತ್ತಾರೆ ಎಂದರೆ ಸರಿ. ನಾನು ಈ ಬಗ್ಗೆ ಜಗಳೂರು ಸರ್ಕಾರಿ ಆಸ್ಪತ್ರೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಈ ಬಗ್ಗೆ ದಿ:30.06.2017 ರಂದು ನನ್ನ ಹೇಳಿಕೆಯನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿ. ಆರೋಪಿ ನಂ:1 ರಿಂದ 7 ರವರನ್ನು ಈ ಹಿಂದೆ ನಾನು ದಿ:10.01.2018 ರಂದು ಠಾಣೆಯಲ್ಲಿ ಗುರುತು ಹಿಡಿದಿರುತ್ತೇನೆ ಎಂದರೆ ಸರಿ. ಆರೋಪಿತರು ನಮಗೆ ಹಲ್ಲೆ ಮಾಡಲು ಕಲ್ಲುಗಳನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಇದ್ದ ಮುಮಾ1 05 ಕಲ್ಲಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದಲ್ಲಿ ಹಾಜರು ಇದ್ದ ಆರೋಪಿ ನಂ:1 ರಿಂದ 4 ರವರೇ ಹಲ್ಲೆ ಮಾಡಿದ ವ್ಯಕ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಆರೋಪಿತರನ್ನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಆರೋಪಿತರನ್ನು ನೋಡಿದ್ದರು ಸಹ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು:-ಆರೋಪಿ ಪರ ಶ್ರೀ.ಹೆಚ್.ಬಿ., ವಕೀಲರಿಂದ:</u>

ನಾವು ಸರ್ವೆ ನಂ:28 ರಲ್ಲಿ ಉಳುಮೆ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂದಿಸಿದ ಹಾಗೇ ಪಹಣಿ ಮತ್ತು ಇತರೆ ದಾಖಲೆಗಳು ಇರುತ್ತವೆ. ಅವುಗಳನ್ನು ನ್ಯಾಯಾಲಯ ಕೊಡಲು ತೊಂದರೆ ಇರುವುದಿಲ್ಲ. ಯಾವ ಆರೋಪಿ ಯಾರಿಗೆ

ಹೊಡೆದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಆ ದಿನ ಘಟನಾ ಸ್ಥಳದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಮುಮಾ1 ಕಲ್ಲುಗಳು ಆರೋಪಿಗಳಿಗೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ1 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೈ ಕಾಲುಗಳಿಂದ ಹೊಡೆದಿಲ್ಲ, ಜೀವ ಬೆದರಿಕೆಯಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೊಲದಲ್ಲಿ ಕೆಲಸ ಮಾಡುವಾಗ ಸ್ವತಃ ಬಿದ್ದು ಸುಳ್ಳು ಗಾಯದ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ**

**ಸಹಿ**

**ಪ್ರ.ದ.ನ್ಯಾ.ದಂ., ಜಗಳೂರು**